ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಯಾಂತ್ರೀಕೃತ ದೋಣಿಗಳನ್ನು ಕೊಳ್ಳಲು ಸಹಾಯ

೨೨೩೭. ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ಬಂದರು ಹಾಗೂ ಮೀನುಗಾರಿಕೆ ಮತ್ತು ಸಣ್ಣ ಕೈಗಾರಿಕೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷದಿಂದ ಈತನಕ ಪ್ರತಿವರ್ಷ ಎಷ್ಟು ಯಾಂತ್ರೀಕೃತ ದೋಣಿಗಳನ್ನು ಕೊಳ್ಳಲು ಮೀನುಗಾರರಿಗೆ ಸಾಲ ಸೌಲಭ್ಯಗಳನ್ನು ಒದಗಿಸಲಾಗಿದೆ (ಜಿಲ್ಲಾವಾರು ಮಾಹಿತಿ ನೀಡಬೇಕು).

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ೧೯೮೬ರಿಂದ ಈಚಿನ ವರ್ಷಗಳಲ್ಲಿ ಯಾಂತ್ರೀಕೃತ ದೋಣಿಗಳನ್ನು ಕೊಳ್ಳಲು ಸಹಾಯಕೋರಿ ಬಂದ ಅರ್ಜಿಗಳೆಷ್ಟು ? ಅವುಗಳಲ್ಲಿ ಪರಿಶಿಷ್ಟ ವರ್ಗದವರಿಂದ ಬಂದ ಅರ್ಜಿಗಳೆಷ್ಟು ? (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು).

ಇ) ವಿವಿಧ ಮಾದರಿಯ ಒಟ್ಟು ಎಷ್ಟು ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ರಾಜ್ಯದಲ್ಲಿವೆ ? (ಪ್ರತಿ ಜಿಲ್ಲೆಯಲ್ಲಿರುವ ಪಟ್ಟಿ ನೀಡುವುದು).

ಈ) ರಾಜ್ಯದಲ್ಲಿ ೧೯೮೬ರ ನಂತರ ಮೀನು ಹಿಡಿಯಲು ಹೋದ ಎಷ್ಟು ದೋಣಿಗಳು ಅಪಘಾತಕ್ಕೆ ಈಡಾಗಿವೆ ಹಾಗೂ ಸತ್ತವರ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿಯನ್ನು ನೀಡುವುದು).

ಉ) ೧೯೮೬ರಿಂದ ಈತನಕ ಅಪಘಾತಕ್ಕೆ ಒಳಗಾದವರ ಕುಟುಂಬಕ್ಕೆ ಅನುಕ್ರಮವಾಗಿ ಪ್ರತಿ ವರ್ಷ ನೀಡಿದ ಹಣವೆಷ್ಟು ?

ಶ್ರೀ ಎಂ. ರಘುಪತಿ (ಮೀನುಗಾರಿಕೆ, ಬಂದರು ಮತ್ತು ಸಣ್ಣ ಕೈಗಾರಿಕೆ ಸಚಿವರು).—

ಅ) ರಾಜ್ಯದ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಿಂದ ಈತನಕ ಯಾಂತ್ರೀಕೃತ ದೋಣಿಗಳನ್ನು ಕೊಳ್ಳಲು ಮೀನುಗಾರರಿಗೆ ಒದಗಿಸಿದ ಸಾಲ ಸೌಲಭ್ಯಗಳ ವಿವರ ಈ ಕೆಳಗಿನಂತಿವೆ.—

ಜಿಲ್ಲೆಯ ಹೆಸರು	ವರ್ಷ	ಅರ್ಹತಾ ಪತ್ರವನ್ನು ನೀಡಲಾದ ದೋಣಿಗಳ ವಿವರ		
		ಟ್ರಾಲರ್ಸ್	ಪರ್ಸೀನ್	ಗಿಲ್‌ನೆಟರ್ಸ್
ದಕ್ಷಿಣ ಕನ್ನಡ ಜಿಲ್ಲೆ	೧೯೮೫-೮೬	೩೯	—	—
	೧೯೮೬-೮೭	—	೪	—
	೧೯೮೭-೮೮	೫	—	—
	ಒಟ್ಟು	೪೪	೪	—
ಉತ್ತರ ಕನ್ನಡ ಜಿಲ್ಲೆ	೧೯೮೫-೮೬	೩೦	—	—
	೧೯೮೬-೮೭	೫೦	—	—
	೧೯೮೭-೮೮	—	—	—
	ಒಟ್ಟು	೮೦	—	—

*ವಿಶೇಷ ಘಟಕ ಯೋಜನೆ

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ೧೯೮೬ರಿಂದ ಈಚಿನ ವರ್ಷಗಳಲ್ಲಿ ಯಾಂತ್ರೀಕೃತ ದೋಣಿಗಳನ್ನು ಕೊಳ್ಳಲು ಸಹಾಯಕೋರಿ ಎಂಟು ಅರ್ಜಿಗಳು ಬಂದಿದ್ದು ಇವುಗಳಲ್ಲಿ ಎಲ್ಲಾ ಎಂಟು ಅರ್ಜಿಗಳು

ಪರಿಶಿಷ್ಟ ವರ್ಗದವರಿಂದ ಬಂದಿರುವುದಾಗಿದೆ. ಈ ಅರ್ಜಿಗಳಲ್ಲಿ ಏಳು ಭಟ್ಕಳ್ ತಾಲ್ಲೂಕಿನಿಂದ ಮತ್ತು ಒಂದು ಅರ್ಜಿ ಕುಮಟ ತಾಲ್ಲೂಕಿನಿಂದ ಬಂದಿದ್ದಾಗಿದೆ.

(ಇ) ರಾಜ್ಯದಲ್ಲಿರುವ ವಿವಿಧ ಪ್ರಾದೇಶಿಯ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳ ಜಿಲ್ಲಾವಾರು ವಿವರ ಈ ಕೆಳಗಿನಂತಿವೆ. —

ಜಿಲ್ಲೆಯ ಹೆಸರು	ದೋಣಿಗಳ ವಿವರ		
	ಟ್ರಾಲರ್ಸ್	ಪರ್ಸೀಸ್	ಗಿಲ್‌ನೆಟರ್ಸ್
ದಕ್ಷಿಣ ಕನ್ನಡ ಜಿಲ್ಲೆ	೧,೨೫೦	೨೭೬	೩೨೫
ಉತ್ತರ ಕನ್ನಡ ಜಿಲ್ಲೆ	೭೫೨	೧೧೪	೪೭೧
ಒಟ್ಟು	೨,೦೦೨	೩೯೦	೭೯೬

(ಈ) ರಾಜ್ಯದಲ್ಲಿ ೧೯೮೬ರ ನಂತರ ಮೀನು ಹಿಡಿಯಲು ಹೋದ ದೋಣಿಗಳು ಅಪಘಾತಕ್ಕೆ ಈಡಾದ ಸಂಖ್ಯೆ ಹಾಗೂ ಸತ್ತವರ ಸಂಖ್ಯೆಯ ಜಿಲ್ಲಾವಾರು ಮಾಹಿತಿಯನ್ನು ಈ ಕೆಳಗೆ ಪೂರೈಸಲಾಗಿದೆ. —

ಜಿಲ್ಲೆಯ ಹೆಸರು	ಅಪಘಾತಕ್ಕೆ ಈಡಾದ ದೋಣಿಗಳ ಸಂಖ್ಯೆ	ಸತ್ತವರ ಸಂಖ್ಯೆ
ದಕ್ಷಿಣ ಕನ್ನಡ ಜಿಲ್ಲೆ	೪೨	೨೫
ಉತ್ತರ ಕನ್ನಡ ಜಿಲ್ಲೆ	೩೩	೧೧
ಒಟ್ಟು	೭೫	೩೬

(ಉ) ೧೯೮೬ರಿಂದ ಈತನಕ ಅಪಘಾತಕ್ಕೆ ಒಳಗಾದವರ ಕುಟುಂಬಗಳಿಗೆ ಪ್ರತಿ ವರ್ಷವೂ ನೀಡಲಾದ ಪರಿಹಾರದ ಹಣದ ವಿವರಗಳು ಈ ಕೆಳಗೆ ನವಂಬರಿಸಲಾಗಿದೆ,

ಜಿಲ್ಲೆಯ ಹೆಸರು	ವರ್ಷ		ನೀಡಿದ ಹಣ (ರೂ. ಲಕ್ಷದಲ್ಲಿ)
ದಕ್ಷಿಣ ಕನ್ನಡ ಜಿಲ್ಲೆ	೧೯೮೬-೮೭		೧.೨೮
	೧೯೮೭-೮೮		೦.೬೫
	೧೯೮೮-೮೯		೦.೬೦
		ಒಟ್ಟು	೨.೫೩
ಉತ್ತರ ಕನ್ನಡ ಜಿಲ್ಲೆ	೧೯೮೬-೮೭		—
	೧೯೮೭-೮೮		೦,೬೦
	೧೯೮೮-೮೯		೦.೩೦
		ಒಟ್ಟು	೦.೯೦